**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ:-ಸಿ1(4)ಬಿ.ಆರ್.ಸಿಹುದ್ದೆಭರ್ತಿ-18/2006-07 ದಿನಾಂಕ: 24-01-2007

**ಸುತ್ತೋಲೆ**

**ವಿಷಯ:**-ಖಾಲಿ ಇರುವ ಬಿ.ಆರ್.ಸಿ ಸಮನ್ವಯಾಧಿಕಾರಿಗಳ ಹುದ್ದೆಗಳನ್ನು ಪೂರ್ಣಕಾಲಿಕವಾಗಿ ಕೌನ್ಸಿಲಿಂಗ್ ಮೂಲಕ ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ:**-1.ಈ ಕಛೇರಿಯ ಸುತ್ತೋಲೆ ಸಂಖ್ಯೆ ಬಿ.ಅರ್.ಸಿ. ಆಯ್ಕೆ:1/2004-05 ದಿನಾಂಕ:-04-04-2005 ಪತ್ರ ದಿನಾಂಕ:-08-04-2005

2. ಬಿ.ಆರ್.ಸಿ ಸ್ಪರ್ಧಾತ್ಮಕ ಪರೀಕ್ಷೆಯ ದಿನಾಂಕ:-07-05-2005

-&&&-

ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಬಿ.ಆರ್.ಸಿ ಸಮನ್ವಯಾಧಿಕಾರಿಗಳ ಹುದ್ದೆಗೆ ಅರ್ಹ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳಿಗೆ ರ್‍ಯಾಂಕ್ ಆಧಾರದ ಮೇಲೆ ಮೊದಲನೆ ಸುತ್ತಿನ ಕೌನ್ಸಿಲಿಂಗ್ ಅನ್ನು ದಿನಾಂಕ: 27.05.2005ರಂದು, ಎರಡನೇ ಸುತ್ತಿನ ಕೌನ್ಸಿಲಿಂಗ್ ಅನ್ನು ದಿನಾಂಕ:21.08.2006ರಂದು, ಮೂರನೆ ಸುತ್ತಿನ ಕೌನ್ಸಿಲಿಂಗ್ ಅನ್ನು ದಿನಾಂಕ:28.09.2006ರಂದು, ಹಾಗೂ ನಾಲ್ಕನೇ ಸುತ್ತಿನ ಕೌನ್ಸಿಲಿಂಗ್ ಅನ್ನು ದಿನಾಂಕ:19.10.2006 ರಂದು ನಡೆಸಿ ಬಿ.ಆರ್.ಸಿ ಸಮನ್ವಯಾಧಿಕಾರಿಗಳ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಈಗ ಇನ್ನೂ ಕೆಲವು ಜಿಲ್ಲೆಗಳಲ್ಲಿ ಬಿ.ಆರ್.ಸಿ ಸಮನ್ವಯಾಧಿಕಾರಿಗಳ ಹುದ್ದೆಗಳು ಖಾಲಿ ಇದ್ದು (ಖಾಲಿ ಹುದ್ದೆಗಳ ಪಟ್ಟಿ ಲಗತ್ತಿಸಿದೆ.)ಇವುಗಳನ್ನು ಭರ್ತಿ ಮಾಡುವ ಸಂಬಂಧ ಬಿ.ಅರ್.ಸಿ. ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಅಧಿಕಾರಿಗಳಿಗೆ **ದಿನಾಂಕ:13.02.2007 ರಂದು 5ನೇ ಸುತ್ತಿನ ಕೌನ್ಸಿಲಿಂಗ್ ಅನ್ನು ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ ಬೆಂಗಳೂರು-01 ಇಲ್ಲಿ ನಡೆಸಲಾಗುವುದು.**

- ಬಿ.ಅರ್.ಸಿ ಹುದ್ದೆ ಆಯ್ಕೆ ಸಂಬಂಧ ದಿನಾಂಕ:-07-05-2005 ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿದ್ದು, ಪರೀಕ್ಷೆಗೆ ಹಾಜರಾದವರಿಗೆಲ್ಲರಿಗೂ ಐದನೇ ಸುತ್ತಿನ ಕೌನ್ಸಿಲಿಂಗ್‌ಗೆ ಅವಕಾಶವಿರುತ್ತದೆ.
- ದಿನಾಂಕ:07-05-2005ರ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅರ್ಹತೆಪಡೆದು ಮೊದಲನೇ, ಎರಡನೇ, ಮೂರನೇ, ಹಾಗೂ ನಾಲ್ಕನೇ ಸುತ್ತಿನಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗದಿದ್ದರು ಅಥವಾ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳದಿರುವ ಅಧಿಕಾರಿಗಳು ಸಹ ಈ ಕೌನ್ಸಿಲಿಂಗ್‌ಗೆ ಹಾಜರಾಗಲು ಅವಕಾಶ ನೀಡಲಾಗಿದೆ.
- ದಿನಾಂಕ:-13.02.2007 ರಂದು ಬೆಳಿಗ್ಗೆ 10.00 ರಿಂದ 1.30 ರವರೆಗೆ ನೊಂದಣೆ-ಮಧ್ಯಾಹ್ನ 2.30 ರಿಂದ ಕೌನ್ಸಿಲಿಂಗ್ ನಡೆಸಲಾಗುವುದು.
- ಮೆರಿಟ್ ಆಧಾರದ ಮೇಲೆ ರಾಜ್ಯದ ಖಾಲಿ ಇರುವ ಯಾವುದೇ ಬಿ.ಆರ್.ಸಿ ಸಮನ್ವಯಾಧಿಕಾರಿಗಳ ಹುದ್ದೆಯನ್ನು ಕೌನ್ಸಿಲಿಂಗ್ ನಲ್ಲಿ ಆಯ್ಕೆ ಮಾಡಿಕೊಳ್ಳಲು ಅವಕಾಶ ಇರುತ್ತದೆ
- ಬಿ.ಅರ್.ಸಿ. ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಅಧಿಕಾರಿಗಳಿಗೆ ಈ ಕಛೇರಿಯಿಂದ ಯಾವುದೇ ಸೂಚನೆ ಪತ್ರ/ ಪತ್ರ ವ್ಯವಹಾರ ನೆಡೆಸುವುದಿಲ್ಲ.

ಮೇಲ್ಕಂಡಂತೆ ಬಿ.ಅರ್.ಸಿ. ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ತಮ್ಮ ಜಿಲ್ಲೆ/ತಾಲ್ಲೂಕ್ ವ್ಯಾಪ್ತಿಯ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳು ಸ್ವಂತ ಖರ್ಚಿನಲ್ಲಿ ಮೇಲ್ಕಂಡ ದಿನಾಂಕದಂದು ಸೂಚಿಸಿರುವ ಸ್ಥಳದಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗಲು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸುವಂತೆ ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗು ಉಪನಿರ್ದೇಶಕರು (ಅಭಿವೃದ್ದಿ) ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ. ಆದ್ದರಿಂದ ಸದರಿ ವಿಷಯದ ಬಗ್ಗೆ ಹೆಚ್ಚು ಪ್ರಚಾರ ನೀಡಿ ಅಧಿಕಾರಿಗಳಿಗೆ ಕೌನ್ಸಿಲಿಂಗ್‌ಗೆ ಹಾಜರಾಗಲು ತಿಳಿಸುವುದು. **ಈ ಸುತ್ತೋಲೆಯ ಒಂದು ಪ್ರತಿಯನ್ನು ತಮ್ಮ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.**

ಸಹಿ/-
(ಬಿ.ನಂಜುಂಡೇಶ್ವರ)
ಸಹ ನಿರ್ದೇಶಕರು (ಆಡಳಿತ)
ಆಯುಕ್ತರ ಪರವಾಗಿ

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ದಿ),
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಧಿರಿಕಾರಿಗಳು,

<u>ಪ್ರತಿಯನ್ನು ಗೌರವಗಳೊಂದಿಗೆ;</u>

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು-1
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಗುಲ್ಬರ್ಗಾ

1. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ
2. ಕಛೇರಿ ಪ್ರತಿ

## ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:-ಸಿ1(4)ಬಿ.ಆರ್.ಸಿಹುದ್ದೆಭರ್ತಿ-18/2006-07 ದಿನಾಂಕ: 24.01.2007

## ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿಯಲ್ಲಿ ಬಿ.ಆರ್.ಸಿ ಸಮನ್ವಯಾಧಿಕಾರಿಗಳ ಖಾಲಿ ಹುದ್ದೆಗಳ ವಿವರ

| ಕ್ರ.ಸ. | ಜಿಲ್ಲೆಯ ಹೆಸರು | ಕ್ರ.ಸ. | ಬಿ.ಅರ್.ಸಿ. ಖಾಲಿ ಹುದ್ದೆ ವಿವರ. |
|---|---|---|---|
| 1. | ಕೋಲಾರ | 1. | 1) ಬಂಗಾರ ಪೇಟೆ |
| | | 2. | 2) ಮಾಲೂರು |
| 2. | ಚಿಕ್ಕಬಳ್ಳಾಪುರ | 3. | 1) ಶಿಡ್ಲಘಟ್ಟ |
| | | 4. | 1) ಚಿಂತಾಮಣಿ |
| 3. | ಶಿವಮೊಗ್ಗ | 5. | 1) ಸೊರಬ |
| 4. | ಉತ್ತರ ಕನ್ನಡ | 6. | 1) ಸೂಪ (ಜೊಯಿಡಾ) |
| | | 7. | 2) ಕಾರವಾರ |
| 5. | ಬಳ್ಳಾರಿ | 8. | 1) ಶಿರಗುಪ್ಪ |
| 6. | ಚಿಕ್ಕಮಗಳೂರು | 9. | 1) ಶೃಂಗೇರಿ |
| 7. | ಉಡಪಿ | 10. | 1) ಕಾರ್ಕಳ |

ಸಹಿ/-
(ಬಿ.ನಂಜುಂಡೇಶ್ವರ)
ಸಹ ನಿರ್ದೇಶಕರು(ಆಡಳಿತ)
ಆಯುಕ್ತರ ಪರವಾಗಿ